**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ.856/2021**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಹನುಮಂತಪ್ಪ ಮಹಾದೇವಪ್ಪ ತೆಪ್ಪದ | ಪಿಡಬ್ಲ್ಯೂ | 7 |
| ತಂದೆ:ಗಂಡನ ಹೆಸರು | : | ಮಹಾದೇವಪ್ಪ | ಸಿಡಬ್ಲ್ಯೂ | 7 |
| ವಯಸ್ಸು | : | 47 ವರ್ಷ | | |
| ಉದ್ಯೋಗ | : | ವ್ಯವಸಾಯ | | |
| ವಾಸ ಸ್ಥಳ | : | ಬಾಳಂಬೀಡ | | |

**ದಿನಾಂಕ:05-07-2022 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ಚಾಸಾ-1 ನನ್ನ ಅಣ್ಣ, ಚಾಸಾ-4 ನನ್ನ ಅಣ್ಣನ ಮಗ, ಚಾಸಾ-5 ನನ್ನ ಅತ್ತಿಗೆ, ಚಾಸಾ-6 ನನ್ನ ಅಣ್ಣ, ಚಾಸಾ-8 ನನ್ನ ಮಾವ, ಚಾಸಾ-9 ನನ್ನ ಮಾವ, ಚಾಸಾ-10 ನನ್ನ ದೊಡ್ಡಪ್ಪ. ನನಗೆ ಈ ಕೇಸಿನ ಬಗ್ಗೆ ಮಾಹಿತಿ ಇದೆ. ಆರೋಪಿತರು ನನಗೆ ಗೊತ್ತು. 2015 ನೇ ಇಸ್ವಿಯಲ್ಲಿ ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ನಮ್ಮ ಹೊಲದಲ್ಲಿ ಉಳಿಮೆ ಮಾಡುತ್ತಿದ್ದೆ, ಆ ಸಂದರ್ಭದಲ್ಲಿ ಆರೋಪಿತರೆಲ್ಲರೂ ಚಾಸಾ-1 ರವರ ಜಮೀನಿನ ಹತ್ತಿರ ಬಂದು ಗಲಾಟೆ ಮಾಡುತ್ತಿದ್ದರು. ಆರೋಪಿತರೆಲ್ಲರೂ ಚಾಸಾ-1 ರವರಿಗೆ ಬಿದೂರು ದೊಣ್ಣೆಯಿಂದ ತಲೆಗೆ ಹಲ್ಲೆ ಮಾಡಿದರು. 2 ನೇ ಆರೋಪಿ ಚಾಸಾ-5 ರವರ ಸೀರೆ ಹಿಡಿದು ಎಳೆದಾಡಿ ಹಲ್ಲೆ ಮಾಡಿದರು. ಅದೇ ರೀತಿ 3 ನೇ ಆರೋಪಿ ಚಾಸಾ-5 ರವರಿಗೆ ಬಿದೂರು ದೊಣ್ಣೆಯಿಂದ ಹಲ್ಲೆ ಮಾಡಿದರು. 3 ನೇ ಆರೋಪಿ ಚಾಸಾ-5 ರವರಿಗೆ ಕಾಲಿನಿಂದ ಒದ್ದನು. ಆರೋಪಿತರೆಲ್ಲರೂ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದರು. ಈ ಗಲಾಟೆಯನ್ನು ನಾನು, ಚಾಸಾ-9 ಮತ್ತು 10 ರವರು ಬಿಡಿಸಿದರು. ಈ ಬಗ್ಗೆ ದೂರನ್ನು ಚಾಸಾ-5 ರವರು ನೀಡಿದರು. ಆ ನಂತರ ಸಾಕ್ಷಿಯು ಚಾಸಾ-1 ರವರು ದೂರು ನೀಡಿದರು ಎಂದು ಸ್ವತಃ ನುಡಿಯುತ್ತಾರೆ. ಈ ಗಲಾಟೆಯ ಸಂಬಂಧ ಪೊಲೀಸರು ನನ್ನ ಹೇಳಿಕೆ ಪಡೆದರು. ಆ ದಿನ ಹಲ್ಲೆ ಮಾಡಿದ

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಆರೋಪಿತರು ಗೈರು ಹಾಜರಾಗಿದ್ದು, ಅವರ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ನುಡಿಯುತ್ತಾರೆ. ಗಲಾಟೆ ಬಿಡಿಸಲು ಬಂದ ಚಾಸಾ-4 ರವರಿಗೆ 1 ಮತ್ತು 3 ನೇ ಆರೋಪಿತರು ಕೋಲಿನಿಂದ ಹಲ್ಲೆ ಮಾಡಿದರು ಎಂದರೆ ಸರಿ. ಆ ದಿನ ಆರೋಪಿತರು ಹಲ್ಲೆಗೆ ಬಳಸಿದ ಬಡಿಗೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಮು.ಮಾ 1 ಮತ್ತು 2 ಎಂದು ಈಗಾಗಲೇ ಗುರುತಿಸಲಾಗಿದೆ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

ದಿಃ12-06-2016 ರಂದು ಈ ಗಲಾಟೆಯಾಯಿತು ಎಂದರೆ ಸರಿ. ಆ ದಿನ ನಾನು, ಚಾಸಾ-1, 4 ಮತ್ತು 5 ರವರು ಗೋವಿನ ಜೋಳ ಬಿತ್ತಲು ಹೋಗಿದ್ದೇವು ಎಂದು ಗೊತ್ತಾಯಿತು ಎಂದರೆ ಸರಿ.

**:ಪಾಟೀ ಸವಾಲು: ಆರೋಪಿ ಪರ ಶ್ರೀ.ಆರ್ ಯು ಪಿ ವಕೀಲರಿಂದ:**

ಚಾಸಾ-5 ರವರು ಆರೋಪಿತರ ವಿರುದ್ಧ ಹಿಸ್ಸೆ ಕೋರಿ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಆ ಪ್ರಕರಣದಲ್ಲಿ ನನಗೆ ಹಿಸ್ಸೆ ಕೊಟ್ಟಿಲ್ಲ, ಪ್ರತ್ಯೇಕ ಕಬ್ಜಾ ಕೋರಿ ಸಲ್ಲಿಸಿದ್ದರು ಎಂದರೆ ಸರಿ. ಈ ಪ್ರಕರಣ ಸಲ್ಲಿಸುವುದಕ್ಕಿಂತ ಮೊದಲಾಗಲೀ ಅಥವಾ ಆ ನಂತರವಾಗಲೀ ಹಿಸ್ಸೆ ಪಡೆದುಕೊಂಡಿಲ್ಲ ಎಂದರೆ ಸರಿ. ಈ ಹಿಂದೆ ಚಾಸಾ-5 ರವರು ಆರೋಪಿತರ ಜೊತೆ ಒಟ್ಟಿಗೆ ವಾಸವಾಗಿದ್ದರು ಎಂದರೆ ಸರಿ. ಚಾಸಾ-5 ರವರಿಗೆ ಮಕ್ಕಳುಗಳು ಇಲ್ಲ. ನಾನು ಮತ್ತು ಚಾಸಾ-1 ರವರು ಕೂಡಿಕೊಂಡು ಚಾಸಾ-5 ರವರ ಮೂಲಕ ಆರೋಪಿತರ ವಿರುದ್ಧ ಒಂದು ಖೊಟ್ಟಿ ಹಿಸ್ಸಾ ದಾವೆ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ಚಾಸಾ-5 ರವರಿಗೆ ಗಂಡ ಮತ್ತು ಮಕ್ಕಳ ಇಲ್ಲದೇ ಇರುವ ಕಾರಣ ಆಕೆಗೆ ಬರುವ ಆಸ್ತಿಯನ್ನು ನಾವುಗಳೇ ಪಡೆದುಕೊಳ್ಳಬೇಕೆಂಬ ದುರುದ್ದೇಶದಿಂದ ಆ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಚಾಸಾ-1, 4 ರವರುಗಳು ಖಾಯಂ ತಿಳವಳ್ಳಿ ಗ್ರಾಮದಲ್ಲಿಯೇ ವಾಸವಾಗಿದ್ದಾರೆ ಎಂದರೆ ಸರಿ. ಚಾಸಾ-1 ಮತ್ತು 4 ರವರ ಆಧಾರ್ ಕಾರ್ಡ, ರೇಷನ್ ಕಾರ್ಡಗಳು ತಿಳವಳ್ಳಿ ಗ್ರಾಮದಲ್ಲಿವೆ. ಅವರುಗಳು ಖಾಯಂ ತಿಳವಳ್ಳಿ ಗ್ರಾಮ ವಾಸಿಗಳು ಎಂದರೆ ಸರಿಯಲ್ಲ. ಅವರಿಗೆ ಸಂಬಂಧಪಟ್ಟ ಆಸ್ತಿಗಳು

ತಿಳವಳ್ಳಿ ಗ್ರಾಮದಲ್ಲಿ ಇವೆ ಎಂದರೆ ಸರಿಯಲ್ಲ. ಸಾಕ್ಷಿಯು ಬಾಳಂಬೀಡ ಗ್ರಾಮದಲ್ಲಿ ಇವೆ ಎಂದು ಸ್ವತಃ ನುಡಿಯುತ್ತಾರೆ. ಚಾಸಾ–1 ಮತ್ತು 4 ರವರು ಬಾಳಂಬೀಡ ಗ್ರಾಮದಲ್ಲಿ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ನನ್ನ ಸಹಿತ 17 ಜನರ ವಿರುದ್ಧ ಮತ್ತೊಂದು ಪ್ರಕರಣ ಸಲ್ಲಿಸಿದ್ದಾರೆ ಎಂದರೆ ಸರಿ. ಆ ಪ್ರಕರಣದಲ್ಲಿ ನಾವುಗಳು ಆರೋಪಿತರಿಗೆ ಹಲ್ಲೆ ಮಾಡಿ ದುಃಖ ಪಡಿಸಿದ್ದೆವು ಎಂದು ದೂರು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ದೂರು ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಪೊಲೀಸರು ಯಾವ ದಿನಾಂಕಕ್ಕೆ ನನ್ನ ಹೇಳಿಕೆ ಪಡೆದರು ಎಂಬುದು ನನಗೆ ಗೊತ್ತಿಲ್ಲ. ಗಲಾಟೆಯಾದ ಸಂದರ್ಭದಲ್ಲಿ ಸುಮಾರು 7–8 ಜನ ಮಾತ್ರ ಇದ್ದರು. ನಮ್ಮ ಜಮೀನಿನಲ್ಲಿಯೂ ಸಹ ಸುಮಾರು 4–5 ಜನ ಕೆಲಸ ಮಾಡುತ್ತಿದ್ದರು. ಗಲಾಟೆಯಾದ ತಕ್ಷಣ ನಾನೊಬ್ಬನೆ ಆ ಸ್ಥಳಕ್ಕೆ ಹೋದೆನು. ಆ ಸ್ಥಳದಲ್ಲಿ ಆರು ಜನ ಮಾತ್ರ ಇದ್ದರು. ಆ ಸ್ಥಳದಲ್ಲಿ ಸುಮಾರು 9–10 ಜನ ಇದ್ದರು. ಆ ಸ್ಥಳದಲ್ಲಿದ್ದ ಎಲ್ಲಾ ಜನರ ಹೆಸರನ್ನು ಹೇಳಲು ಬರುವುದಿಲ್ಲ. ಚಾಸಾ–5 ರವರು 3 ನೇ ಆರೋಪಿಗೆ ಚಿಕ್ಕಮ್ಮನಾಗಬೇಕು. 1 ನೇ ಆರೋಪಿಗೆ ಚಾಸಾ–5 ರವರು ಸೊಸೆಯಾಗಬೇಕು. ಆರೋಪಿತರು ಚಾಸಾ–5 ರವರಿಗೆ ಹಲ್ಲೆ ಮಾಡಿದ ಸಂಬಂಧ ತಲೆಯಿಂದ ರಕ್ತ ಬಂತು. ಆಕೆಯ ಮೈ ಮೇಲೆಲ್ಲಾ ರಕ್ತ ಆಗಿತ್ತು. ಆ ರಕ್ತವಾಗಿದ್ದ ಬಟ್ಟೆಯನ್ನು ನಾವು ಪೊಲೀಸರಿಗೆ ಕೊಟ್ಟಿಲ್ಲ. ಆ ನಂತರ ಪೊಲೀಸರು ಆ ರಕ್ತ ಸಿಕ್ತ ಬಟ್ಟೆಯನ್ನು ಜಪ್ತು ಮಾಡಿದರೋ ಅಥವಾ ಇಲ್ಲವೋ ಎಂಬುದನ್ನು ನನಗೆ ಗೊತ್ತಿಲ್ಲ. ಆ ದಿನ 8.00 ಗಂಟೆಗೆ ನಮ್ಮ ಜಮೀನಿನ ಬಳಿ ಹೋದೆವು. ಆ ಗಲಾಟೆಯು 10.00 ರಿಂದ 12.00 ಗಂಟೆಯವರೆಗೆ ನಡೆಯಿತು. ಆ ಗಲಾಟೆಯಾದ ನಂತರ ಏನಾಯಿತು ಎಂದರೆ ನನಗೆ ಗೊತ್ತಿಲ್ಲ. ದೂರನ್ನು ಯಾರು ಬರೆದರು ಎಂಬುದು ನನಗೆ ಗೊತ್ತಿಲ್ಲ. ದೂರು ಕೊಡಲು ಠಾಣೆಗೆ ಯಾರ ಯಾರು ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ನಮ್ಮ ವಿರುದ್ಧ ನೀಡಿರುವ ಪ್ರಕರಣದಲ್ಲಿನ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಈ ಖೊಟ್ಟಿ ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾವುಗಳು ಅಲ್ಲಿಗೆ ಹೋಗಿ ಆರೋಪಿತರಿಗೆ ಹಲ್ಲೆ ಮಾಡಿ ಸಣ್ಣಪುಟ್ಟ ಗಾಯಗಳನ್ನು ಮಾಡಿಕೊಂಡು ಈ ಸುಳ್ಳು ದೂರನ್ನು ಆರೋಪಿತರ ವಿರುದ್ಧ ನೀಡಿದ್ದೇವೆ ಎಂದರೆ ಸರಿಯಲ್ಲ. ಆ ದಿನ ಆರೋಪಿತರು ಅವಾಚ್ಯ ಶಬದಗಳಿಂದ ಬೆವಿದಿಲ್ಲ. ಕೈಗಳಿಂದಲಾಗಲೀ, ಅಥವಾ ಬಡಿಗೆಯಿಂದದಿಾಗಲೀ ಹಲ್ಲೆ ಮಾಡಿಲ್ಲ, ಚಾಸಾ–5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಸೀರೆ ಹಿಡಿದು ಜಗ್ಗಾಡಿಲ್ಲ, ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಬಡಿಗೆಗಳು ಆರೋಪಿತರು ಹಲ್ಲೆಗೆ ಬಳಸಿದ ಅಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಬಡಿಗೆಗಳು ಸಾಮಾನವಾಗಿ ಎಲ್ಲಾ ರೈತರ ಮನೆಯಲ್ಲಿ ಇರುತ್ತವೆ ಎಂದರೆ ಸರಿ. ಆ ದಿನ ಆರೋಪಿತರು

ಯಾವುದೇ ಗಲಾಟೆ ಮಾಡದೇ ಇದ್ದರೂ ಸಹ ನಾನು ಮತ್ತು ಚಾಸಾ–1 ರವರು ಸೇರಿಕೊಂಡು ಈ ಸುಳ್ಳು ದೂರನ್ನು ಸಲ್ಲಿಸಿದ್ದೆವು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್